## ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆ: 1439/2022

ಚಾ.ಸಾ-5 ಫ್ರಾ.ಸಾ-1

ದಿಃ 26.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಮಹದೇವಯ್ಯ ಸಿ.ಜಿ |
| ತಂದೆ ಹೆಸರು | ಗಿರಿಗೌಡ |
| ವಯಸ್ಸು | 59 ವರ್ಷ |
| ವೃತ್ತಿ | ಎ.ಎಸ್.ಐ. |
| ವಿಳಾಸ | ಬ್ಯಾಡರಹಳ್ಳಿ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2016 ರಿಂದ 2019 ರ ವರೆಗೆ ಬಸವೇಶ್ವರ ನಗರ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ. 5342 ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 22.1.2019 ರಂದು ರಾತ್ರಿ 8.30 ರ ವೇಳೆಗೆ ನಾನು ಹಾಗು ಚಾ.ಸಾ-6 ರಿಂದ ಚಾ.ಸಾ-8 ರವರು ನಮ್ಮ ಠಾಣಾ ಸರಹದ್ದಿನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ನನಗೆ ಕರೆ ಮಾಡಿ ನೇತಾಜಿ ಆಟದ ಮೈದಾನದ ಗೇಟ್ ಹತ್ತಿರ ಇರುವ ಖಾಲಿ ಜಾಗದಲ್ಲಿ 5-6 ಜನರು ಮಾರಕಾಯುಧಗಳನ್ನು ಹಿಡಿದು ದರೋಡೆಗೆ ಸಜ್ಜಾಗಿರುವುದಾಗಿ ಮಾಹಿತಿ

ಬಂದಿರುವುದಾಗಿ ತಿಳಿಸಿ ನನಗೆ ಚಾ.ಸಾ-6 ರಿಂದ ಚಾ.ಸಾ-8 ರವರನ್ನು ಕರೆದುಕೊಂಡು ಕೂಡಲೇ ನೇತಾಜಿ ಆಟದ ಮೈದಾನದ ಬಳಿಗೆ ಬರುವಂತೆ ತಿಳಿಸಿದ್ದರು.

3. ಅದರಂತೆ ನಾನು ಮತ್ತು ಚಾ.ಸಾ-6 ರಿಂದ ಚಾ.ಸಾ-8 ರವರು ರಾತ್ರಿ ಸುಮಾರು 10 ಗಂಟೆಗೆ ಸದರಿ ಆಟದ ಮೈದಾನದ ಬಳಿಗೆ ಹೋಗಿರುತ್ತೇವೆ. ಅಲ್ಲಿ ಚಾ.ಸಾ-1 ಮತ್ತು ಚಾ.ಸಾ-4 ರವರು ಇದ್ದರು. ಹಾಗೆಯೆ ಅವರೊಂದಿಗೆ ಇಬ್ಬರು ಪಂಚರು ಇದ್ದರು. ಬಳಿಕ ಚಾ.ಸಾ-1 ರವರು ರಾತ್ರಿ 10.25 ರ ವೇಳೆಗೆ ಸಂಬಂಧಿತ ವ್ಯಕ್ತಿಗಳನ್ನು ಸುತ್ತುವರೆದು ಹಿಡಿಯುವಂತೆ ಸೂಚನೆ ನೀಡಿದ್ದರು. ಆ ವೇಳೆಗೆ ಸ್ಥಳದಲ್ಲಿ ಒಟ್ಟು 5 ಜನರು ಇದ್ದರು. ದಾಳಿ ವೇಳೆಗೆ ಅವರಲ್ಲಿ ಇಬ್ಬರು ತಪ್ಪಿಸಿಕೊಂಡು ಓಡಿಹೋಗಿರುತ್ತಾರೆ. 1 ನೇ ಆರೋಪಿ ಗಣೇಶ್ ರವರನ್ನು ಚಾ.ಸಾ-1 ಮತ್ತು ಚಾ.ಸಾ-4 ರವರು ಹಿಡಿದಿರುತ್ತಾರೆ. ಆತನು ಒಂದು ಕಬ್ಬಿಣದ ರಾಡ್ ಅನ್ನು ಹೊಂದಿದ್ದನು. 2 ನೇ ಆರೋಪಿ ಪ್ರವೀಣ್ ಅಲಿಯಾಸ್ ಧರ್ಮರಾಜ್ ರವರನ್ನು ನಾನು ಹಿಡಿದಿರುತ್ತೇನೆ. ಆತನು ಒಂದು ಮರದ ದೊಣ್ಣೆಯನ್ನು ಹೊಂದಿದ್ದನು. ಚಾ.ಸಾ-6 ರವರು 3 ನೇ ಆರೋಪಿ ಅಭಿಷೇಕ್ ರವರನ್ನು ಹಿಡಿದಿರುತ್ತಾರೆ. ಆತನು ಒಂದು ಮರದ ದೊಣ್ಣೆಯನ್ನು ಹೊಂದಿದ್ದನು.

4. ಚಾ.ಸಾ-1 ರವರು ಸದರಿ ವ್ಯಕ್ತಿಗಳನ್ನು ವಿಚಾರಿಸಿ ಅವರ ಹೆಸರು ಮತ್ತು ವಿವರ ಹಾಗು ಓಡಿಹೋದ ವ್ಯಕ್ತಿಗಳ ಹೆಸರು ಮತ್ತು ವಿವರಗಳನ್ನು ತಿಳಿದುಕೊಂಡಿರುತ್ತಾರೆ. ಚಾ.ಸಾ-1 ರವರು ಸ್ಥಳದಲ್ಲಿ ಮಹಜರ್ ಮಾಡಿ

ಆರೋಪಿಗಳು ಹೊಂದಿದ್ದ ಆಯುಧಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಆ ವೇಳೆಗೆ ಅಮಾನತುಪಡಿಸಿಕೊಂಡ ಸ್ವತ್ತುಗಳನ್ನು ಗುರುತಿಸಬಲ್ಲೆ. ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಸೀಲು ಮಾಡಲಾದ ಸ್ಥಿತಿಯಲ್ಲಿರುವ ಸ್ವತ್ತುಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಗುರುತಿಸಿರುವ ಒಂದು ಕಬ್ಬಿಣದ ರಾಡ್ ಮತ್ತು ಎರಡು ಮರದ ದೊಣ್ಣೆಗಳನ್ನು ಕ್ರಮವಾಗಿ ಮು.ಮಾ-1 ರಿಂದ ಮು.ಮಾ-3 ಎಂದು ಗುರುತಿಸಲಾಯಿತು.

5. ನಂತರ ನಾವು 1 ರಿಂದ 3 ನೇ ಆರೋಪಿಗಳು ಹಾಗು ಅವರಿಂದ ಅಮಾನತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಚಾ.ಸಾ-1 ರವರು ಅವರನ್ನು ಚಾ.ಸಾ-9 ರವರ ಮುಂದೆ ಹಾಜರುಪಡಿಸಿ ಒಂದು ವರದಿಯನ್ನು ನೀಡಿರುತ್ತಾರೆ. ನಾನು ಈ ಪ್ರಕರಣದ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಅವರಲ್ಲಿ ಈ ದಿನ 1 ಮತ್ತು 4 ನೇ ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀಸವಾಲುಃ ಶ್ರೀ ಎನ್.ಆರ್., 1 ಮತ್ತು 4 ನೇ ಆರೋಪಿಗಳ ಪರ ವಕೀಲರಿಂದಃ**

6. ನೇತಾಜಿ ಆಟದ ಮೈದಾನದಿಂದ ನಮ್ಮ ಠಾಣೆಯು 1¼ ಕಿ.ಮೀ. ಅಂತದರದಲ್ಲಿದೆ. ನೇತಾಜಿ ಆಟದ ಮೈದಾನದ ಬಳಿ ರಾತ್ರಿ 10 ಗಂಟೆ ವೇಳೆಗೆ ದೀಪದ ವ್ಯವಸ್ಥೆ ಇದೆ ಮತ್ತು ಆ ವೇಳೆಗೆ ಅಲ್ಲಿ ಜನರು ಓಡಾಡುತ್ತಿರುತ್ತಾರೆ ಎಂದರೆ ನಿಜ. ಚಾ.ಸಾ-1 ರವರು ನನಗೆ ಕರೆ ಮಾಡಿದಾಗ ನಾವು ಠಾಣೆಯಿಂದ 5-6 ಕಿ.ಮೀ. ಅಂತರದಲ್ಲಿದ್ದೆವು.

7. ನಾನು ಹೇಳಿರುವಂತೆ ದಿಃ 22.1.2019 ರಂದು ಚಾ.ಸಾ-1 ರವರು ರಾತ್ರಿ 8.30 ರ ವೇಳೆಗೆ ನನಗೆ ಕರೆಮಾಡಿರಲಿಲ್ಲ ಅಥವಾ ದರೋಡೆ ತಯಾರಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನದಂದು ಸಂಬಂಧಿತ ಆಟದ ಮೈದಾನದ ಬಳಿ ಹೋಗಿರಲಿಲ್ಲ ಮತ್ತು ಅಲ್ಲಿ ಯಾವುದೇ ಮಹಜರ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಂಬಂಧಿತ ದಿನದಂದು ಈ ಪ್ರಕರಣದ ಆರೋಪಿಗಳು ಸ್ಥಳದಲ್ಲಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಗಳಿಂದ ಮು.ಮಾ-1 ರಿಂದ ಮು.ಮಾ-3 ರಲ್ಲಿ ಗುರುತಿಸಿರುವ ಸ್ವತ್ತುಗಳನ್ನು ಅಮಾನತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಮು.ಮಾ-3 ರಲ್ಲಿ ಗುರುತಿಸಿರುವ ರೀತಿಯ ಸ್ವತ್ತುಗಳು ಬೇರೆ ಕಡೆ ಸಿಗುತ್ತವೆ.

8. ನಾನು ಯಾವುದೇ ದಾಳಿಯಲ್ಲಿ ಭಾಗಿಯಾಗಿರಲಿಲ್ಲ ಮತ್ತು ನನಗೆ ಆರೋಪಿಸಿದ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ-1 ರವರು ನೀಡಿದ್ದ ಸುಳ್ಳು ದೂರಿಗೆ ಪೂರಕವಾಗಿ ಚಾ.ಸಾ-1 ರವರ ಸೂಚನೆಯಂತೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಮು.ಮಾ-3 ರಲ್ಲಿ ಗುರುತಿಸಿರುವ ಸ್ವತ್ತುಗಳನ್ನು ಸ್ಥಳದಿಂದ ಅಮಾನತುಪಡಿಸಿಕೊಂಡ ಬಗ್ಗೆ ನನಗೆ ಅದರಲ್ಲಿನ ಯಾವುದೇ ವಿಶೇಷ ಗುರುತಿನ ಬಗ್ಗೆ ತಿಳಿದಿಲ್ಲ.

ಎಸ್.ಸಿ.ಸಂಖ್ಯೆ: 1439/2022
ಪ್ರಾ.ಸಾ-1

ಮರುವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.